**ಸಾಕ್ಷಿಯನ್ನು ದಿನಾಂಕಃ 03.11.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ MNR ವಕೀಲರಿಂದಃ**

ನಾನು ಮರಿಜವರನಾಯಕರವರ ಮಗಳು ಎಂದು ತೋರಿಸಲು ದಾಖಲೆಗಳನ್ನು ಹಾಜರು ಮಾಡಿರುತ್ತೇನೆ ಆದರೆ ಯಾವ ದಾಖಲೆಗಳನ್ನು ಹಾಜರು ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ಪ್ರತಿವಾದಿಯರ ವಿರುದ್ದ ನನ್ನ ತಂದೆ ಆಸ್ತಿ ನನಗೆ ಬೇಕು ಎಂದು ಕೋರಿ ದಾವೆ ಮಾಡಿರುತ್ತೇನೆ. ನನ್ನ ತಾಯಿಯ ಹೆಸರು ದೇವಮ್ಮ. ನನ್ನ ತಾಯಿಯ ತವರೂರು ಯಲಚವಾಡಿ. ನನ್ನ ತಾಯಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. ನನ್ನ ತಂದೆ ಮರಿಜವರನಾಯಕರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ವೆಂಕಟಮ್ಮರವರ ಅಪ್ಪನ ಹೆಸರು ನನಗೆ ಗೊತ್ತಿಲ್ಲ. ನನ್ನ ತಂದೆಯ ತಾಯಿಯ ಹೆಸರು ನನಗೆ ಗೊತ್ತಿಲ್ಲ. ನಾನು ಮರಿಜವರನಾಯಕರವರ ಮಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕುಮಾರಬೀಡು ಗ್ರಾಮದಲ್ಲಿ ವಾಸವಿರುತ್ತೇನೆ.

2 ನೇ ವಾದಿ ನನಗೆ ತಂಗಿಯಾಗಬೇಕು. ದಾವಾ ಆಸ್ತಿಗಳ ಸ.ನಂ. ನನಗೆ ಗೊತ್ತು. ಸ.ನಂ.97/28, 30/5. ದಾವಾ ಆಸ್ತಿಗಳು ನನ್ನ ತಂದೆ ಮರಿಜವರನಾಯಕರವರಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಕುನ್ನನಾಯಕರವರ ಮಗ ಜವರನಾಯಕ ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿದು ಸ್ವಲ್ಪ ಕಾಲಾವಕಾಶ ತೆಗೆದುಕೊಂಡು ಕುನ್ನನಾಯಕ ನಮ್ಮ ಅಣ್ಣ ಎಂದು ನುಡಿಯುತ್ತಾರೆ. ಜವರನಾಯಕ ಮತ್ತು ಕುನ್ನನಾಯಕ ಅಣ್ಣ ತಮ್ಮಂದಿರು, ಅವರು ನನಗೆ ಅಣ್ಣಂದಿರಾಗಬೇಕು. ನಿಪಿ-1 ಆರ್ ಟಿಸಿ ಯಲ್ಲಿ ಕುನ್ನನಾಯಕನ ಮಗ ಜವರನಾಯಕ ಎಂದು ಹೆಸರಿದ್ದು ಅವರನ್ನು ಈ ದಾವೆಯಲ್ಲಿ ಪಕ್ಷಗಾರನನ್ನಾಗಿ ಮಾಡಿಲ್ಲ ಎಂದರೆ ಸರಿ. ಕುನ್ನನಾಯಕ ಮಗ ಜವರನಾಯಕ ರವರ ಹೆಸರಿಗೆ ಖಾತೆ ಬದಲಾವಣೆಯಾಗಿರುವ ಬಗ್ಗೆ ನಾನು ಸಂಬಂಧಪಟ್ಟ ಪ್ರಾಧಿಕರಾದ ಮುಂದೆ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಯಲಚವಾಡಿ ಗ್ರಾಮದ ಮಂಚನಾಯಕ ನನಗೆ ಮಾವನಾಗಬೇಕು. ಮಂಚನಾಯಕನ ಹೆಂಡತಿ ಹೆಸರು ಸಿದ್ದಮ್ಮ. ಮಂಚನಾಯಕನ ಹೆಂಡತಿ ಹೆಸರು ದೇವಮ್ಮ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಮಂಚನಾಯಕ ಮತ್ತು ದೇವಮ್ಮ ದಂಪತಿಯ ಮಗಳು ಎಂದರೆ ಸಾಕ್ಷಿಯು ನಾನು ಮರಿಜವರನಾಯಕ ಮತ್ತು ದೇವಮ್ಮರವರ ಮಗಳು ಎಂದು ನುಡಿಯುತ್ತಾರೆ.

ಮರಿಜವರನಾಯಕ ಮತ್ತು ದೇವಮ್ಮ ಗಂಡ ಹೆಂಡತಿ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೀರಾ ಎಂದು ಕೇಳಲಾಗಿ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನನಗೂ ಮತ್ತು ಪ್ರತಿವಾದಿಯ ಕುಟುಂಬಕ್ಕೂ ಸಂಬಂಧವಿಲ್ಲದಿದ್ದರೂ ಆಸ್ತಿಯನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ನಾನು ಮತ್ತು 2ನೇ ವಾದಿ ಸೇರಿಕೊಂಡು ಸುಳ್ಳು ದಾವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಕುನ್ನನಾಯಕ ಮತ್ತು ನನ್ನ ನಡುವೆ ಸಂಬಂಧ ಅತ್ತಿಗೆ ನಾದಿನಿ. ಕುನ್ನನಾಯಕ ಮತ್ತು ಪುಟ್ಟನರಸಮ್ಮ ಇವರಿಗೆ ಮಕ್ಕಳು ಇರುವುದಿಲ್ಲ. ಮರಿಜವರನಾಯಕರವರ ಹೆಂಡತಿ ವೆಂಕಟಮ್ಮ ಎಂದರೆ ಸರಿ. ಮರಿಜವರನಾಯಕ ಮತ್ತು ವೆಂಕಟಮ್ಮ ಇವರಿಗೆ ಕುನ್ನನಾಯಕ ಮತ್ತು ಜವರನಾಯಕ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಜವರನಾಯಕನ ಹೆಂಡತಿ ಹೆಸರು ಸಿದ್ದಮ್ಮ. ದಾವಾ ಆಸ್ತಿಯ ಸ.ನಂ. 97/28 ರಲ್ಲಿ ಎಷ್ಟು ಎಕರೆ ವಿಸ್ತೀರ್ಣ ಇರುತ್ತದೆ ಎಂದು ಕೇಳಲಾಗಿ ಸಾಕ್ಷಿಯು 5 ಎಕರೆ 20 ಗುಂಟೆ ಇರುತ್ತದೆ ಅದು ಭಾಗವಾಗಿಲ್ಲ ಎಂದು ನುಡಿಯುತ್ತಾರೆ. ನಿಪಿ-3 ಆರ್.ಟಿ.ಸಿಯಲ್ಲಿ ಪರಮೇಶೆಗೌಡ ಎಂಬ ಹೆಸರಿದ್ದು ಅವರನ್ನು ಈ ದಾವೆಯಲ್ಲಿ ಪಕ್ಷಗಾರನನ್ನಾಗಿ ಮಾಡಿಲ್ಲ ಎಂದರೆ ಸರಿ.

ದಾವಾ ಆಸ್ತಿಗಳ ಚೆಕ್ಕುಬಂಧಿಗಳನ್ನು ನನಗೆ ಹೇಳಲು ಗೊತ್ತಾಗುವುದಿಲ್ಲ. ನನ್ನ ದಾವಾ ಪತ್ರದಲ್ಲಿ ಮರಿಜವರನಾಯಕ ಇವರಿಗೆ ಇಬ್ಬರು ಹೆಂಡತಿಯರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ವೆಂಕಟಮ್ಮ ಯಾವಾಗ ತೀರಿಹೋಗಿರುತ್ತಾರೆಂದು ನನಗೆ ಗೊತ್ತಿಲ್ಲ, ಅವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಮರಿಜವರನಾಯಕ ಇವರು ದೇವಮ್ಮ ಇವರನ್ನು ವಿವಾಹವಾಗಿದ್ದರು ಎಂದು ವಾದ ಪತ್ರದಲ್ಲಿ ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಮರಿಜವರನಾಯಕ ಇವರಿಗೆ ವೆಂಕಟಮ್ಮ ಎಂಬ ಹೆಸರಿನ ಒಬ್ಬಳೇ ಹೆಂಡತಿ ಅವರಿಗೆ ಕುನ್ನನಾಯಕ ಮತ್ತು ಜವರನಾಯಕ ಎಂಬ ಹೆಸರಿನ ಇಬ್ಬರು ಮಕ್ಕಳು ಮಾತ್ರ ಎಂದರೆ ಸರಿಯಲ್ಲ. ನಾನು ಮತ್ತು 2ನೇ ವಾದಿ ಮಂಚನಾಯಕನ ಮಕ್ಕಳು ಎಂದರೆ ಸರಿಯಲ್ಲ. ಲಕ್ಷ್ಮಮ್ಮ ನನ್ನ ಮತ್ತು 2ನೇ ವಾದಿಯ ಸಹೋದರಿ ಇದ್ದು ಅವರು ಮರಣ ಹೊಂದಿರುತ್ತಾರೆ ಎಂದು ಹೇಳಿದ್ದು ಈ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿ.

ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲೆಗಳನ್ನು ಹಾಜರು ಮಾಡಿಲ್ಲ. ನಾನು 2ನೇ ವಾದಿ ಹಾಗೂ ಪ್ರತಿವಾದಿಯರು ಒಟ್ಟು ಕುಟುಂಬದ

ಸದಸ್ಯರು ಮತ್ತು ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕುಮಾರಬೀಡು ಗ್ರಾಮದ ಮಾದನಾಯಕ ಎಂಬುವರನ್ನು ಮದುವೆಯಾಗಿರುತ್ತೇನೆ. ನನಗೂ ಮತ್ತು 2 ನೇ ಪ್ರತಿವಾದಿಗೂ ದಾವಾ ಆಸ್ತಿಗಳ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

**(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**